46/3
1

Doc-1
I-P-2

R No KRNN 12

2 - 1 1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಪ್ರಕಾಶಕರು ಆರಮನೆ ಶಿವಸ್ವಾಮಿರಾವ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ವಾಮಿರಾವ್ ಎಂ. ಎಸ್. ಕೃಷ್ಣರಾವ್ [8 ಪುಟ

ಕಾಳೀ ಯೋಜನೆಗೆ ಹಣ ದೊರೆವ ಸಂಭವ

ಭಾರತದ ಆರ್ಥಿಕತೆ ಬಗ್ಗೆ ಚೀನಾ ಹೇಳಿಕೆ

ಹಾಂಗ್‌ಕಾಂಗ್— ಈ ವರ್ಷ ಪ್ರಾರಂಭದಿಂದ ಭಾರತದ ಆರ್ಥಿಕ ಪರಿಸ್ಥಿತಿ ಕೆಡುತ್ತಿದೆಯೆಂದೂ, ಬರುವ ವರ್ಷ ದೇಶದ ಕಷ್ಟಗಳು ಮತ್ತೂ ಹೆಚ್ಚುವುದೆಂದೂ, ಚೀನಾ ಅಧಿಕೃತ ಜನತಾ ವಾರ್ತಾ ಸಂಸ್ಥೆ ಅಭಿಪ್ರಾಯ ವ್ಯಕ್ತಪಡಿಸಿದೆ.

ದಿವ್ಯವಾಣಿ

ಎಲಾ ರಾಷ್ಟ್ರಗಳಿಗೂ ಅರ್ಥವಾಗುವ ರೀತಿ ಹಣ ಮಾತಾಡುತ್ತದೆ.— ಅಸ್ಸೆ ಬೇ

★

ನಗರಸಭಾ ಚುನಾವಣೆ

ಬೆಂಗಳೂರು— ಪ್ರಜಾರಾಜ್ಯದ ಉತ್ಸವ ನಿಮಿತ್ತವಾಗಿ ನಗರಸಭಾ ಚುನಾವಣೆಯೂ ಆದಷ್ಟು ಬೇಗ ನಡೆಸಲ್ಪಡಬೇಕೆಂದು ಶ್ರೀ ಕೆಂಗಲ್ ಹನುಮಂತಯ್ಯ ಎಂ.ಪಿ ಯವರು. ಬುಧವಾರ ಪೌರಸಮಿತಿ ಏರ್ಪಡಿಸಿದ್ದ ಮೇಯರ್ ಶ್ರೀ ಟಿ. ನಾಗಣ್ಣನವರು ಮತ್ತಿತರರ ಅಭಿನಂದನಾ ಸಮಾರಂಭದಲ್ಲಿ ಹೇಳಿದರು.

●

ಸುಪ್ರೀಂ ಎಚ್ಚರಿಕೆ

ಬೆಂಗಳೂರು— ಪ್ರಸ್ತುತ ವಾಗ್ವಾದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ವ್ಯಕ್ತಪಡಿಸದಿರುವಂತೆ ಕಾಂಗ್ರೆಸ್ ಪಾರ್ಟಿ ಸದಸ್ಯರೂ, ಹಿಂದುಳಿದ ವರ್ಗದ ಕಮಿಷನ್ನಿನ ಅಧ್ಯಕ್ಷರೂ ಆದ ಶ್ರೀ ಹವನೂರಿಗೆ ಕೆ.ಪಿ.ಸಿ ಕಾರ್ಯದರ್ಶಿ ಶ್ರೀ ರೆಡ್ಡಿಯವರು ಪತ್ರದ ಮೂಲಕ ತಿಳಿಸಿರುತ್ತಾರೆ

★

ಚಿನ್ನಕ್ಕೆ ನುಗ್ಗಾಟ

ಚಿಕಾಗೋ— 1475ರ ಜುಲೈನಲ್ಲಿ ಪರಿವರ್ತನೆಯಾಗುವ ಚಿನ್ನಕ್ಕೆ ಡಿಸೆಂಬರ್ 203 ಡಾಲರು (ರೂ 1520) ಗಳಂತೆ ಅಮೇರಿಕಾ ಬ್ರೋಕರುಗಳು ಗೋಲ್ಡ್ ರಷ್ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

★

ರಾಜಕೀಯ ಸಂಬಂಧ

ನವದೆಹಲಿ— ಭಾರತವು ಸೋವಿಯೆಟ್‌ಗಳಿಗೆ ನೊಡನೆ ರಾಜಕೀಯ ಸಂಬಂಧವನ್ನು 20 ವರ್ಷಗಳ ನಂತರ ಪುನರ್ ಪ್ರಾರಂಭಿಸಿತು.

★

ಮೇಯರ್ ರವರ ಪ್ರಶ್ನೋಕ್ತಿ

ಬೆಂಗಳೂರು — ಕಾಂಗ್ರೆಸ್ ಪಕ್ಷಕ್ಕೂ ನಗರ ಸಭಾ ಚುನಾವಣೆಯು ಆದಷ್ಟು ಬೇಗ ನಡೆಯುಬೇಕೆಂಬ ಹಿಕಾಸಕ್ತಿ ಇರುವದೆಂದೂ, ಚುನಾಯಿತ ಕೌನ್ಸಿಲ್ ಬದಲು ಸರಕಾರ ಆಡಳಿತಗಾರರನ್ನು ನೇಮಿಸುವ ಬಗ್ಗೆ ಕಾಂಗ್ರೆಸ್ ಪಾರ್ಟಿ ಎಂದೂ ಇಚ್ಛಿಸಿಲ್ಲವೆಂದೂ ಮೇಯರ್ ಶ್ರೀ ನಾಗಣ್ಣನವರು ಸಭೆಯಲ್ಲಿ ತಿಳಿಸಿದರು — ಮೇಯರ್‌ರವರ ಅಧಿಕಾರ ಅವಧಿಯು ಕೃಮಬದ್ಧವಾಗಿ ತಾ|| 8 ರವರಿಗಿದ್ದು, ಅಷ್ಟರೊಳಗೆ ನಿರ್ಧಾರ ತಿಳಿಯುವನು ಸರ್ಕಾರಕ್ಕೆ ಕರ್ತವ್ಯವೆಂದು ಹೇಳಿದ ಏರ್ಪ ಸದಸ್ಯರು, ಆಡಳಿತಗಾರರನ್ನು ತರಲು ಕಾರ್ಯರೂಪಕ್ಕೆ ತಂದರೆ ತೀವ್ರ ಚಳವಳಿ ನಡೆಸಲಾಗುವುದೆಂದು ಹೇಳಿದರು.

●

ಯುದ್ಧದ ಭೀತಿ

ವಿಶ್ವಸಂಸ್ಥೆ— ಮಧ್ಯಪ್ರಾಚ್ಯ ದೇಶಗಳ ಯುದ್ಧದ ಕಡೆ ಜಾಸ್ತಿ ಗಮನಹರಿಸಿದ್ದು, ಈ ಭಾಗದಲ್ಲಿ ಹೊಸ ಶಸ್ತ್ರಾಸ್ತ್ರಗಳ ಆಮದಾರ್ಥವಾಗಿ ಕಂಡುಬಂದಿದೆಯೆಂದು ಪ್ರಧಾನ ಕಾರ್ಯದರ್ಶಿ ಶ್ರೀ ವಾಲ್ಡ್‌ಹೀಂ ಶಂಕಿಸಿರುವರು.

★

ಕಾಂಗ್ರೆಸ್‌ಗೆ ಜಯ

ಬೆಂಗಳೂರು— ಪಿರಿಯಾಪಟ್ಟಣ ಪುರಸಭಾ ಚುನಾವಣೆಯಲ್ಲಿ 12 ಸ್ಥಾನಗಳೂ ಕಾಂಗ್ರೆಸ್ಸಿಗೆ ದೊರೆಯಿತು.

ತೋಟಗಾರಿಕೆ ಇಲಾಖೆ ನಿರ್ದೇಶಕರು

ಕರ್ನಾಟಕ ಸರ್ಕಾರವು ರಾಜ್ಯದ ತೋಟಗಾರಿಕೆಯಲ್ಲಿ ಜಾಟೆ ನಿರ್ದೇಶಕರಾಗಿರುವ ಶ್ರೀ ಕೆ.ಟಿ ಕೃಷ್ಣಪ್ಪ ಅವರಿಗೆ ಬಡ್ತಿ ನೀಡಿ ತಕ್ಷಣ ಮುಂದೆ ಆಜ್ಞೆಯಾಗುವ ವರೆಗೆ ಅದೇ ಇಲಾಖೆಯ ನಿರ್ದೇಶಕರನ್ನಾಗಿ ಶ್ರೀ ಎಂ. ಮಾಸ್ತೀಗೌಡ ಅವರ ಸ್ಥಾನದಲ್ಲಿ ನೇಮಿಸಿದೆ. ಶ್ರೀ ಮಾಸ್ತೀಗೌಡ ಅವರು ಸೇವೆಯಿಂದ ನಿವೃತ್ತರಾಗುವರು.

★

ಕಾಳೀನದಿ ಯೋಜನೆಗೆ ಹಣ

ಹಣಕಾಸಿನ ವಿಚಾರದಲ್ಲಿ ಖಚಿತವಾಗಿರುವ 230 ಕೋಟಿ ರೂ ಅಂದಾಜಿನ ಕಾಳೀನದಿ ಯೋಜನೆಗೆ ವಿಶ್ವಬ್ಯಾಂಕಿನಿಂದ ಹಣ ದೊರೆಯುವ ಸಂಭವವಿದೆ ಕೇಂದ್ರದ ಹಣಕಾಸು ಮಂತ್ರಿ ಶ್ರೀ ಸುಬ್ರಹ್ಮಣ್ಯಂರವರು ತಮ್ಮ ಮುಂದಿನ ವಾಷಿಂಗ್ಟನ್ ಭೇಟಿಯಲ್ಲಿ ಈ ಬಗ್ಗೆ ವಿಶ್ವ ಬ್ಯಾಂಕಿಗೆ ತಿಳಿಸುವ ಯೋಜನೆ ಹೊಂದಿರುವದಾಗಿ ಬೆಂಗಳೂರಿನಲ್ಲಿ ತಿಳಿಸಿರುವರು.

●

ವೇತನಕ್ಕೆ ಪದಾರ್ಥಗಳ ಹರಾಜು

ಔರಂಗಾಬಾದ್‌ನಿಂದ ಬಂದಿರುವ ವರದಿಯ ಪ್ರಕಾರ, ಭಿಂಡ್ ಶ್ರೀ ವೆಂಕಟೇಶ್ವರ ಕಾಲೇಜಿನ ಉಪಾಧ್ಯಾಯರು ಮತ್ತು ಇತರ ನೌಕರರಿಗೆ 5 ತಿಂಗಳ ವೇತನ ಕೊಟ್ಟಿಲ್ಲವಾದ್ದರಿಂದ ಅದಕ್ಕೆ ಅವರೇ ಆ ಕಾಲೇಜಿನ ಗೃಹ ಪದಾರ್ಥಗಳು, ಸಾಕ್ಕೆ, ಬಟ್ಟೆಬರೆ, ಪುಸ್ತಕಗಳನ್ನು ತಾ|| 6ರಂದು ಹರಾಜು ಹಾಕುವುದಾಗಿ ತಿಳಿಸುವ ಪ್ರಕಟಣೆಯನ್ನು ಒಂದು ಸ್ಥಳೀಯ ದಿನಪತ್ರಿಕೆ ಮುಖ ಪುಟದಲ್ಲಿ ಪ್ರಕಟಿಸಿರುವರು ಈ ಮಾಲ್ಯ ಅವರು ತಮ್ಮ ದುಸ್ಥಿತಿಯನ್ನು ಸಾರ್ವಜನಿಕರಿಗೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ತಿಳಿಯಪಡಿಸಿದ್ದಾರೆ.

★ ವಿಶ್ವ ಶಸ್ತ್ರದ ಭೀತಿ ಹೆಚ್ಚಿದೆ ಎಂದು ಚೀನಾ ಅಭಿಪ್ರಾಯವಾಗಿದೆ.

ಕೆ ಕೆ ಶೆಟ್ಟರ ಮನವಿ

ಮಂಗಳೂರಿನ ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಕೆ ಶೆಟ್ಟಿಯವರು ಮನವಿ ಮಾಡಿ, ದಕ್ಷಿಣ ಕನ್ನಡದಿಂದ ನೆರೆ ರಾಜ್ಯಗಳಲ್ಲಿ ಕಲ್ಲಿ ಸಂಗಾಣಿಕ ಮೂಲಕ ಅಕ್ಕಿ ಹೋಗದಿರುವಂತೆ ಕಾಂಗ್ರೆಸಿಗರು ಹಾಗೂ ಸಾರ್ವಜನಿಕರು ಸಹಾಯ ಮಾಡಬೇಕೆಂದು ತಿಳಿಸಿದರು.

★

ತೀವ್ರ ಚಳವಳಿ

ನವದೆಹಲಿಯಿಂದ ಬಂದ ವಾರ್ತೆ ಪ್ರಕಾರ 74-75 ರಲ್ಲಿ ಕಣ್ಣಿನ ಪೊರೆ ರೋಗಿಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವುದು ಜೀವವಿಮಾ ಸಂಸ್ಥೆಗೆ ತೀವ್ರ ಕಾಳಜಿಯ ಅಂಶವಾಗಿದೆ ಎನ್ನಲಾಗಿದೆ

○

ವೈದ್ಯರ ಚಳುವಳಿ

3 ಸಾವಿರ ಕರ್ನಾಟಕ ವೈದ್ಯರು, ಹೌಸ್ ಸರ್ಜನರು ಮತ್ತಿತರರು ಮೇರೆ ಮೀರಿದ ವೇತನ, ಸ್ಥಾನಮಾನ ಉಕ್ತಿಯಿಂದ ಕೇಳಿಕೆ ಹಾಕಿ ಕೆಲಸ ನಿಲ್ಲಿಸುವ ಚಳುವಳಿಯನ್ನು ನಿನ್ನೆ ಹೂಡಿದ್ದರೆಂದು ಬಾಟ್ನಾ ವಾರ್ತೆ.

ಭರತ್
ರೇನ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹು ಸಾರ್

A Firm known for
Genuine Good Business

(2)

ಅದ್ಭುತ ಗಣಿತ ತಜ್ಞ

ಅತಮಕೂರಾಬಾದು— ನಾನಂದ ತಾಲ್ಲೂಕಿನ ಬಳನ್ನಾ ಗ್ರಾಮದ 71 ವರ್ಷದ ಅವಿವಾಹಿತ ವೈಶ ರಾವೂ ಬಾ ಎಂಬಾತನು ಮಿಲಿಯಗಟ್ಟಲೆ ಸಂಖ್ಯೆಗಳ ನಾಲ್ಕನೇ ಭಾಗದ ಸಂಖ್ಯೆಯನ್ನು ಕಾಗದ ಪೆನ್ಸಿಲ್ ಇಲ್ಲದೆ ಮನಸ್ಸಿನಲ್ಲೇ ಲೆಕ್ಕ ಮಾಡಿ ತಿಳಿಸುವರು — ಕೂಡುವುದೂ, ಕಳೆಯುವುದೂ, ಗುಣಾಕಾರ ಮಾಡುವುದು 100 ಅಂಕಿಗಳಿಗೂ ಹೆಚ್ಚಾಗಿರುವವನ್ನು ಲೀಲಾಜಾಲವಾಗಿ ಮಾಡುತ್ತಿರುವರು — ಈತನ ಅತೀವ ಗಣಿತ ಸಾಮರ್ಥ್ಯವು ಇಲ್ಲಿಗೆ ಬಂದ ಅಮೇರಿಕಾ ಶಾಂತಿ ತಂಡದವರಿಂದ ಆಕರ್ಷಿತವಾಯಿತು — ಈತನು ಹಳ್ಳಿ ಸ್ಕೂಲಿನಲ್ಲಿ ನಾಲ್ಕು ಕ್ಲಾಸುಗಳು ಮಾತ್ರ ಓದಿರುವನು — ಈತನ ಉಪಾಧ್ಯಾಯರಾಗಿದ್ದ ನಾನಾಲಾಲ್ ಭಟ್ಟರವರು ಈ ರೀತಿ ಮನಸ್ಸಿನಲ್ಲಿ ಲೆಕ್ಕಾಚಾರ ಮಾಡುವ ಬಗ್ಗೆ ಈತನಲ್ಲಿ ಹೆಚ್ಚು ಉತ್ಸಾಹ ಉಂಟುಮಾಡಿದರು — ಈತನು ಗುರುದಕ್ಷಿಣೆಯಾಗಿ ಅವರ ಸಂಸಾರಕ್ಕೆ ಈಗಲೂ ಆಹಾರಧಾನ್ಯ ಕಳುಹಿಸುತ್ತಿದ್ದಾರೆ.

ಇಂದಿರಾ ಪತ್ರಿಕೋದ್ಯಮ

ನವದೆಹಲಿ— ವಿಶ್ವ ಪತ್ರಿಕೋದ್ಯಮವು ಒಬ್ಬಾರೆಯಾಗಿ, ಈ ಯುಗಕ್ಕೆ ತಕ್ಕಂತೆ ಇರುವ ಆರ್ಥಿಕ ಮತ್ತು ರಾಜಕೀಯ ನಿರ್ಧಾರವನ್ನು ಎದುರಿಸಲು ಸಿದ್ಧವಿಲ್ಲ ಎಂದು ಅಂತರ್ರಾಷ್ಟ್ರೀಯ ಪ್ರೆಸ್ ವಾರ್ತಾ ವಿಮರ್ಶೆ ತಿಳಿಸಿದೆ.

ಮತದಾನ ಪಟ್ಟಿಗಳ ಸಿದ್ಧತೆ

ಮದರಾಸು— ಚುನಾವಣೆಗಳು ಯಾವಾಗಬೇಕಾದರೂ ನಡೆಯಲು ಸಿದ್ಧವಿರುವಂತೆ, ತಮಿಳುನಾಡು ಸರಕಾರವನ್ನು ಮತದಾನದ ಪಟ್ಟಿಯನ್ನು ಕೇಂದ್ರವು ಕೇಳಿತೆ ಎಂದು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ಪತ್ರಿಕೆಯವರಿಗೆ ತಿಳಿಸಿದರು.

ವುಡ್‌ಲಾಂಡ್ಸ್ 3 1 75 ರಿಂದ

ಅಮೋಘ 4 ನೇ ವಾರ

ಚ ಟ್ಟ ಕ್ಕಾ ರಿ

ಡ ರ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಪಾತ್ರ — ಲಕ್ಷ್ಮೀ ಮೋಹನ್ ದಿನ ೫ ಪ್ರದರ್ಶನಗಳು

ಅಪೆರಾ 3 1 75 ರಿಂದ

ಅ ನ್ನ - ತ ಂ ಗ್ಗ ಲ

ಮುತ್ತುಕಾಮನ್ ಜಯಲಲಿತ

ಅಭಿನಯಿಸಿರುವ

ಅಮೋಘ ತಮಿಳು ಚಿತ್ರ

3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

—HumanitarianPropoganda Monthly—

Protect the Cow

ಭಾರತದಲ್ಲಿ ನಿವಧೆ

ಪೂರ್ಣ ನಿಶ್ಚೇದವಾಗಲಿ

Contribute Liberally

to the National Defence Fund

Edited Printed and Published by Dharmapracharanmate M S. Krishna Rao (Proprietor) at the Satyavadi Press, Chamarajapuram Mysore